ಎನ್.ಪಿ., ಮೈಸೂರು ಮತ್ತು ಅಡಿಷನಲ್ ಎಸ್.ಪಿ. ಮೈಸೂರು ಜಿಲ್ಲೆ, ರವರು ಸ್ಥಳಕ್ಕೆ ಧಾವಿಸಿ ಬಿಗಿ ಬಂದೋಬಸ್ತನ್ನು ಜಾರಿಗೊಳಿಸಿ ತನಿಖೆಯ ಮೇಲ್ವಿಚಾರಣೆಯನ್ನು ನೋಡಿಕೊಂಡಿರುತ್ತಾರೆ. ಈ ಹೊಕದ್ದಮೆಯಲ್ಲಿ 31 ಜನ ಅಪರಾಧಿಗಳನ್ನು ದಿನಾಂಕಃ 18-3-1993ರಂದು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ನ್ಯಾಯಾಲಯವು 30 ಜನರನ್ನು ದಿನಾಂಕ ಃ 30-3-1993ರವರೆಗೆ ನ್ಯಾಯಾಂಗ ಬಂಧನದಲ್ಲಿಡುವಂತೆ ಆದೇಶಿಸಿರುತ್ತದೆ. ಈ ಅಪರಾಧಿಗಳಲ್ಲಿ ಒಬ್ಬ ಬಾಲ ಅಪರಾಧಿಯೂಗಿದ್ದುದರಿಂದ ಇವನನ್ನು ಬಾಲಾ ಅಪರಾಧಿ ಕೇಂದ್ರಕ್ಕೆ ಕಳುಹಿಸಿ ಕೊಡಲಾಗಿದೆ. ನಂತರ ಮತ್ತೂ 8 ಅಪರಾಧಿಗಳನ್ನು ದಸ್ತಗಿರಿ ಮಾಡಲಾಗಿದೆ.

ತಾಲ್ಲೂಕು ದಂಡಾಧಿಕಾರಿಗಳು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ, ಕಲಂ 144ರ ಅನ್ವಯ ನಾಗವಳ್ಳಿ ಗ್ರಾಮ ಹಾಗೂ ಅದರ ಸುತ್ತಮುತ್ತಲ 5 ಕಿ.ಮೀ. ವ್ಯಾಪಿಯಲ್ಲಿ ದಿನಾಂಕಃ 17-3-1993ರಿಂದ 23-3-1993ರವರೆಗೆ ನಿಷೇದಾಜ್ಞೆಯನ್ನು ವಿಧಿಸಿರುತ್ತಾರೆ.

ಈ ಘಟನೆಯಲ್ಲಿ ಒಟ್ಟು 71,350-00 ರೂ.ಗಳಷ್ಟು ನೊಂದವರಿಗೆ ಪರಿಹಾರ ಧನವನ್ನು ಈವರೆಗೆ ನೀಡಲಾಗಿದೆ. ಇದಲ್ಲದೆ ಹಾನಿಯಾದ ಮನೆಗಳ ಮಾಲೀಕರಿಗೆ ಹೆಂಚುಗಳು ಹಾಗೂ ಮರದ ತೀರುಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಕೊಟ್ಟಿರುತ್ತಾರೆ.

ಕೇಸಿನ ತನಿಖೆಯು ಮುಂದುವರೆದಿದೆ. ಸತ್ತು ಹೋದವರಿಗೆ ಈಗಾಗಲೇ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೇವೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ ಃ ಇವೆರಡರ ಬಗ್ಗೆ ನಾನು ಮತ್ತು ಮಾನ್ಯ ದೇಶಪಾಂಡೆಯವರು ಪ್ರಸ್ತಾಪ ಮಾಡಿದ್ದೇವೆ. ನಾಗವಳ್ಳಿಯ ಪ್ರಕರಣದಲ್ಲಿ ಹೊಡೆದಿರುವುದು ನಿಜವೆಂದು ಕಂಡಿದೆ. ಆದರೂ ಇವತ್ತು, 302ನೇ ಸೆಕ್ಷನ್ ಪ್ರಕಾರ ಕೊಲೆಯ ಆಧಾರದ ಮೇಲೆ ಅವನನ್ನು ದಸ್ತಗಿರಿ ಮಾಡಿಲ್ಲ. ಈ ರೀತಿ ಆತ ತಪ್ಪಿಸಿಕೊಂಡು ಹೋಗಲು ಈ ಕೇಸನ್ನು ಮುಚ್ಚಿಹಾಕಲು ಬಹಳ ಬುದ್ಧಿ ವಂತಿಕೆಯಿಂದ ಪಿತೂರಿ ನಡೆಯುತ್ತಿದೆ. ಹೊಡೆದಿರುವುದು ನಿಜವೆಂದು ತಮ್ಮ ಹೇಳಿಕೆಯ ಪ್ರಕಾರ ಹೇಳುತ್ತಿದ್ದೀರಿ. ಆದ ಕಾರಣ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ....

ಶ್ರೀ ಎಂ. ವೀರಪ್ಪ ಮೊಯಿಲಿ ಃ ನಾಗವಳ್ಳಿಯಲ್ಲಿ ಈಗಾಗಲೇ ನಾನು ಹೇಳಿದಂತೆ 31 ಜನ ಅಪರಾಧಿಗಳನ್ನು ಸೆಕ್ಷನ್ 143, 148, 147, 324, 435, 435, 456, 424, 427, 302ರ ಪ್ರಕಾರ ಪುನಃ ದಸ್ತಗಿರಿ ಮಾಡಲಾಗಿದೆ. ಆ ತನಿಖೆಯಲ್ಲಿ ಯಾವ ಲೋಪವಾಗಿಲ್ಲ, ತನಿಖೆಯನ್ನು ಮಾಡಿದ್ದಾರೆ. ಪರಿಹಾರ ಕೊಟ್ಟಿದ್ದು ಕಡಿಮೆಯಾಯಿತು ಎಂದು ಕಂಡುಬಂದಿದ್ದಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಾಲ್ಕು ಮನೆಗಳನ್ನು ಸುಟ್ಟಿದ್ದಾರೆ. 50 ಮನೆಗಳು ಡ್ಯಾಮೇಜ್ ಆಗಿವೆ ಎಂದು ಹೇಳಿದ್ದೀರಿ. ಅದಕ್ಕೆ ಕೊಟ್ಟಿರುವ ಪರಿಹಾರ 71,350-00 ರೂಪಾಯಿಗಳು. ಇದರಲ್ಲಿ ಏನಾಗುವುದಕ್ಕೆ ಸಾಧ್ಯವಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಹೆಂಚುಗಳು, ಮರದ ತೀರುಗಳನ್ನು ಕೊಟ್ಟಿದ್ದೇವೆ. 71ಸಾವಿರದಲ್ಲಿ 25 ಸಾವಿರ ಪರಿಹಾರದ್ದು. ಬಾಕಿ ಉಳಿದದ್ದು ಇನ್ನೂ ಬೇಕಾದರೆ ಕೊಡೋಣ.

Sri. R. V. Deshpande : Please give an assurance that adequate compensation will be given.

ಶ್ರೀ ವಾಟಾಳ್ ನಾಗರಾಜ್ : ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ತಾವು ಸಂಪೂರ್ಣವಾದಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು, ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಅಡಕ್ವೇಟ್ ಕಂಪನ್‌ಸೇಷನ್ ಕೊಡುತ್ತೇವೆಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಖಂಡಿತವಾಗಿಯೂ ಕೊಡುತ್ತೇವೆ. ಆದಷ್ಟು ಕೊಟ್ಟಿದ್ದೇವೆ. ಇನ್ನೂ ಕೊಡೋಣ.

5.25 ಪಿ.ಎಂ.

(೫) ವಿಷಯ : ಭಟ್ಕಳದಲ್ಲಿ ದಿನಾಂಕ : 1-4-93ರಂದು ನಡೆದ ಘಟನೆ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಟ್ಕಳದಲ್ಲಿ ದಿನಾಂಕ : 1-4-93ರಂದು ನಡೆದ ಘಟನೆಗೆ ಸಂಬಂಧಿಸಿದ ವಿಷಯದ ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ :-

ದಿನಾಂಕ : 1ನೇ ಏಪ್ರಿಲ್ 1993ರಂದು ಭಟ್ಕಳದಲ್ಲಿ ಮಾರುತಿ ದೇವರ ರಥೋತ್ಸವ ಕಾರ್ಯಕ್ರಮವಿದ್ದಿತು. ರಥೋತ್ಸವದ ಮೆರವಣಿಗೆಯಲ್ಲಿ ಸುಮಾರು ಹತ್ತು ಸಾವಿರ ಜನರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮವು ಮುಗಿಯುತ್ತಾ ಬರುವಾಗ ಸುಮಾರು 18-45 ಘಂಟೆಯ ಸಮಯದಲ್ಲಿ ಡಾ : ಅಸ್ಪಕ್ ಬ್ರಹ್ಮಾವರ್ ಇವರ ಮನೆಯ ಕಡೆಯಿಂದ ಮೆರವಣಿಗೆಕಾರರ ಮೇಲೆ ಕಲ್ಲು ತೂರಲ್ಪಟ್ಟವು. ಇದರಿಂದ,

ಸಿಟ್ಟಿಗೆದ್ದ ಮೆರವಣಿಗೆಯಲ್ಲಿದ್ದ ಕೆಲವು ಯುವಕರು ಡಾ : ಆಸ್ಪಕ್ ಬ್ರಹ್ಮಾವರ್ ಇವರ ಮನೆಯ ಮೇಲೆ ಕಲ್ಲು ತೂರಿದರು ಮತ್ತು ಗ್ಲಾಸುಗಳನ್ನು ಒಡೆದರು. ಅಲ್ಲದೆ ಮುಂದೆ ಅವರು ಬಸ್ತಿ ಮಸೀದಿಯ ಹತ್ತಿರ ನಿಲ್ಲಿಸಿರುವ ಕಾರುಗಳಿಗೂ ಕಲ್ಲು ತೂರಿ ಜಖಂಗೊಳಿಸಿದರು ಹಾಗೂ ಮಸೀದಿಗೂ ಕಲ್ಲು ತೂರಿದರು. ನಂತರ ಇರಿಯುವುದು, ಲೂಟಿ, ಬೆಂಕಿ ಹಚ್ಚುವಿಕೆ, ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳು ಪ್ರಾರಂಭವಾದವು.

ಅದೇ ದಿವಸ 1100 ಘಂಟೆಗೆ ರಾತ್ರಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದಕ್ಕೆ ಕಲ್ಲು ತೂರಿ ಜಖಂಗೊಳಿಸಿದರು. 11-45 ಘಂಟೆಯ ಸುಮಾರಿಗೆ ಸಕ್ರಪ್ಪ ಎಂಬುವವನಿಗೆ ಆಟೋದಲ್ಲಿ ಮನೆಗೆ ಹೋಗುತ್ತಿರುವ ಅಬ್ಬರಿ ಎಂಬಲ್ಲಿ ಆಟೋವನ್ನು ನಿಲ್ಲಿಸಿ ಚೂರಿಯಿಂದ ತಿವಿದು ಗಾಯಗೊಳಿಸಿರುತ್ತಾರೆ. ಅದೇ ಸಮಯಕ್ಕೆ ಕೆಲವು ಜನರು ಗುಂಪು ಕೂಡಿಕೊಂಡು ಮಾರಕ ಅಸ್ತ್ರಗಳನ್ನು ಹಿಡಿದು ಒಬ್ಬ ಹಿಂದೂವಿನ ಮನೆಯ ಮೇಲೆ ಕಲ್ಲು ತೂರಿ, ಭತ್ತದ ಗುಡಾಣಕ್ಕೆ ಬೆಂಕಿ ಹಚ್ಚಿ ಒಬ್ಬನಿಗೆ ಚಾಕುವಿನಿಂದ ಗಾಯಗೊಳಿಸಿರುತ್ತಾರೆ.

ಅದೇ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 17ರಲ್ಲಿ ನಾಗಪ್ಪ ಗೋವಿಂದ ಮೊಗೇರ್ ಎಂಬುವನಿಗೆ ಕಬ್ಬಿಣದ ಸಲಾಕೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ. ಅಲ್ಲದೆ ಮಧ್ಯ ರಾತ್ರಿ ಸಮಯದಲ್ಲಿ ಮಹ್ಮದ ಸಾದಿಕ ಆಲಿ ಸಾಹೇಬ್ ಎಂಬುವನು ತನ್ನ ಆಟೋದಲ್ಲಿ ಪುಷ್ಪಾಂಜಲಿ ಥಿಯೇಟರಿಗೆ ಹೋಗುವಾಗ ಕೆಲವು ಗಲಭೆಕೋರರು ಸದರಿ ಆಟೋವನ್ನು ಭಟ್ಕಳ್‌ನ ಎಸ್.ಬಿ.ಐ. ಹತ್ತಿರ ನಿಲ್ಲಿಸಿ ಜಖಂಗೊಳಿಸಿದರು. ದಿನಾಂಕ : 1.4.1993ರಂದು ರಾತ್ರಿ 11.00 ಘಂಟೆಯ ಸಮಯದಲ್ಲಿ ನಡಾಫಾ ಕೂಲ್ ಡ್ರಿಂಕ್ಸ್ ಅಂಗಡಿಯ ಹತ್ತಿರ 10-15 ಜನರ ಗುಂಪೊಂದು ಸುನಿಲ್ ಮತ್ತು ಅವರ ಸಹೋದರನ ಮೇಲೆ ಹಲ್ಲೆ ನಡೆಸಿದರು. ರಾತ್ರಿ 11-00 ಘಂಟೆಯ ಸಮಯದಲ್ಲಿ ಗುಂಪೊಂದು ಶ್ರೀ ನಾಗೇಶ್ ಧಂಗಯ್ಯ ನಾಯಕ್, ಚೌತಾನಿ ಎಂಬುವರ ಮನೆಗೆ ಮುತ್ತಿಗೆ ಹಾಕಿ ಕಿಟಕಿ ಗ್ಲಾಸುಗಳನ್ನು ಒಡೆದು ಹನ್ನೆರಡು ಸಾವಿರ ರೂಪಾಯಿಯಷ್ಟು ನಷ್ಟ ಉಂಟು ಮಾಡಿರುತ್ತಾರೆ. ದಿನಾಂಕ : 2-4-1 993ರಂದು ರಾತ್ರಿ 1.15 ಘಂಟೆಯ ಸುಮಾರಿಗೆ ನಾಗರಾಜ ಮಂಗಪ್ಪ ನಾಯ್ಕ ಎಂಬುವನು ಸಿನಿಮಾ ನೋಡಿ ಮನೆಗೆ ಬರುವಾಗ ಕೆಲವರು ಗುಂಪುಮಾಡಿ ಕತ್ತಿ ಮತ್ತು ಚಾಕುವಿನಿಂದ ಇರಿದು ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ಮಂಡಳ್ಳಿ ಎಂಬಲ್ಲಿ ಕುಪ್ಪಮೊಗೇರ ಎಂಬುವನು ತನ್ನ ಸಂಗಡಿಗರೊಂದಿಗೆ ಮೀನು ಹಿಡಿಯಲು ಹೋದಾಗ ಕೆಲವರು ಗುಂಪು ಕೂಡಿಕೊಂಡು ಹಲ್ಲೆ ನಡೆಸಿ ಗಾಯಗೊಳಿಸಿರುತ್ತಾರೆ. 2.30ರ ಸಮಯದಲ್ಲಿ ಹೆಚ್. ಬಿ. ಕಾಲೋನಿಯ ಶ್ರೀ ಎ. ಜಿ. ಶಾಸ್ತ್ರಿ ಎಂಬುವರ ಮೋಟಾರು ಸೈಕಲ್ ಸ್ಕ್ಯಾಂಡನ್ನು ಕೆಲವು ದುಷ್ಕರ್ಮಿಗಳು ನಾಶಪಡಿಸಿ ಒಂದು ಸಾವಿರ ರೂಪಾಯಿಯಷ್ಟು ನಷ್ಟ ಉಂಟುಮಾಡಿರುತ್ತಾರೆ. 00-3000ರ ಸಮಯದಲ್ಲಿ ಶ್ರೀ ಹರೀಶ್ ರಾಮದಾಸ್ ಶೇಟ್ ಕಿದ್ವಾಯ ಲೋಡ್ ಇವರ ಆಟೋರಿಕ್ಷಾಗೆ ಬೆಂಕಿ ಹಚ್ಚಿ 30 ಸಾವಿರ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ. ಅದೇ ಸಮಯದಲ್ಲಿ ಶ್ರೀ ಸಂದೀಪ್ ಗಣೇಶ್ ಶೇಟ್, ಕಿದ್ವಾಯಿ ರೋಡ್ ಇವರ ಮನೆ ಹತ್ತಿರ ಇರುವ ಟೆಲಿಫೋನ್ ಬೂತ್‌ಗೆ ಬೆಂಕಿ ಹಚ್ಚಿ ಐದು ಸಾವಿರ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ.